ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಮೊಹಮ್ಮದ್ ನವಾಜ್

ಶ್ರೀ ಹೆಚ್.ಎಮ್. ರುದ್ರಕುಮಾರ್ ವಿರುದ್ಧ

ಶ್ರೀಮತಿ ಗೌರಮ್ಮ ಹೆಚ್.ಆರ್. ಮತ್ತು ಇತರರು

ಕ್ರಿಮಿನಲ್ ಅಪೀಲುಸಂಖ್ಯೆ: 894/2019, ದಿನಾಂಕ 30 ನೇ ಮೇ, 2019

ತೀರ್ಪು

ನ್ಯಾಯಮೂರ್ತಿ ಶ್ರೀ ಮೊಹಮ್ಮದ್ ನವಾಜ್:

ದಂಡ ಪ್ರಕ್ರಿಯಾ ಸಂಹಿತೆಯ 482 ನೇ ಪ್ರಕರಣದಡಿ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಸಂಖ್ಯೆ: 8789/2017 ರಲ್ಲಿ ಹೊರಡಿಸಿದದಿನಾಂಕ: 09.04.2019 ರ ಆದೇಶವನ್ನು ತಳ್ಳಿಹಾಕಲು ಮತ್ತು ತತ್ಪರಿಣಾಮವಾಗಿ, ಸದರಿ ಅರ್ಜಿಯಲ್ಲಿ ದಂಡ ಪ್ರಕ್ರಿಯಾ ಸಂಹಿತೆಯ 340 ನೇ ಪ್ರಕರಣದಡಿ ಅಪೀಲುದಾರರು ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸಲು ಹಾಗೂ ದಂಡ ಪ್ರಕ್ರಿಯಾ ಸಂಹಿತೆಯ 195 ( 1) (ಬಿ) ( i) ನೇ ಪ್ರಕರಣದಡಿ ವಿಚಾರಣೆಗೆ ಆದೇಶಿಸಲು ಕೋರಿ ಈ ಕ್ರಿಮಿನಲ್ ಅಪೀಲನ್ನು, ದಂಡ ಪ್ರಕ್ರಿಯಾ ಸಂಹಿತೆಯ 341 ನೇ ಪ್ರಕರಣದಡಿ ಸಲ್ಲಿಸಲಾಗಿದೆ.

2. ಅಪೀಲಿನ ಸಮರ್ಥನೀಯತೆಗೆ ಸಂಬಂಧಿಸಿದ ಆಕ್ಷೇಪಣೆಯನ್ನು ಕಚೇರಿಯು ಎತ್ತಿದೆ.

3. ಶ್ರೀ ಹೆಚ್.ಎಮ್. ರುದ್ರಕುಮಾರ್, ಅಪೀಲುದಾರರ-ಖುದ್ದು ಪಕ್ಷಕಾರರ ಅಹವಾಲನ್ನು ನಾನು ಆಲಿಸಿದ್ದೇನೆ.

4. ಮೊಕದ್ದಮೆಯ ಸಂಕ್ಷಿಪ್ತ ಸಂಗತಿಗಳೆಂದರೆ:

45 ನೇ ಹೆಚ್ಚುವರಿ ಮುಖ್ಯ ಮೆಟ್ರೊಪಾಲಿಟಿನ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯ, ಬೆಂಗಳೂರು ಇವರ ಕಡತ ಪಿ.ಸಿ.ಆರ್.ಸಂಖ್ಯೆ: 7063/2017 ರಲ್ಲಿ, ಇದರಲ್ಲಿನ ಅಪೀಲುದಾರರು ಸಲ್ಲಿಸಿದ ದೂರನ್ನು, ದಂಡ ಪ್ರಕ್ರಿಯಾ ಸಂಹಿತೆಯ 156 ( 3) ನೇ ಪ್ರಕರಣದ ಅಡಿಯಲ್ಲಿನ ತನಿಖೆಗಾಗಿ ಪೊಲೀಸರಿಗೆ ಉಲ್ಲೇಖಿಸಲಾಗಿತ್ತು ಮತ್ತು ಭಾರತ ದಂಡ ಸಂಹಿತೆ, 1860 ರ 506, 341, 504, 340, 339 ಮತ್ತು 149 ನೇ ಪ್ರಕರಣಗಳ ಅಡಿಯಲ್ಲಿ ದಂಡನೀಯ ಅಪರಾಧಗಳಿಗಾಗಿ ಅಪರಾಧಸಂಖ್ಯೆ: 358/2017 ರಲ್ಲಿ 1 ರಿಂದ 14 ರವರೆಗಿನ ಆರೋಪಿಗಳ ಪ್ರತಿವಾದಿಗಳ ವಿರುದ್ಧ ಪೀಣ್ಯ ಪೊಲೀಸ್ ಠಾಣೆಯು ಪ್ರಕರಣವನ್ನು ನೋಂದಾಯಿಸಿತ್ತು.

5. 1 ರಿಂದ 14 ರವರೆಗಿನ ಆರೋಪಿಗಳು/ಪ್ರತಿವಾದಿಗಳು, ಪಿ.ಸಿ.ಆರ್.ಸಂಖ್ಯೆ: 7063/2017 ರಲ್ಲಿನ ವ್ಯವಹರಣೆಗಳನ್ನು ರದ್ದುಗೊಳಿಸಲು ಕೋರಿ ಈ ನ್ಯಾಯಾಲಯದ ಮುಂದೆ ದಂಡ ಪ್ರಕ್ರಿಯಾ ಸಂಹಿತೆಯ 482 ನೇ ಪ್ರಕರಣದಡಿ ಕ್ರಿಮಿನಲ್ ಅರ್ಜಿಸಂಖ್ಯೆ: 8789/2017 ನ್ನು ಹೂಡಿದ್ದಾರೆ.

6. ಸದರಿ ಕ್ರಿಮಿನಲ್ ಅರ್ಜಿಯಲ್ಲಿ ಅಪೀಲುದಾರ/ದೂರುದಾರರು ಪ್ರತಿವಾದಿಸಂಖ್ಯೆ: 2 ಆಗಿದ್ದರು.ಅವರಿಗೆ ನೋಟೀಸನ್ನು ನೀಡಲಾಗಿತ್ತು ಮತ್ತು ಅವರು ಹಾಜರಾಗಿ, ಅರ್ಜಿಯಲ್ಲಿನ ಹಲವು ಹೇಳಿಕೆಗಳು ಸುಳ್ಳಾಗಿವೆ ಮತ್ತು ಅದರಲ್ಲಿನ ಅರ್ಜಿದಾರರು ಪರಸ್ಪರ ವಿರೋಧಾತ್ಮಕ ಹೇಳಿಕೆಗಳನ್ನು ನೀಡಿದ್ದಾರೆ ಎಂದು ಹೇಳಿ ದಂಡ ಪ್ರಕ್ರಿಯಾ ಸಂಹಿತೆಯ 340 ನೇ ಪ್ರಕರಣದ ಅಡಿಯಲ್ಲಿ ಅವರು ಐ.ಎ.ಸಂಖ್ಯೆ: 1/2019 ನ್ನು ಹೂಡಿದ್ದಾರೆ ಮತ್ತು ತದನುಸಾರವಾಗಿ, ದಂಡ ಪ್ರಕ್ರಿಯಾ ಸಂಹಿತೆಯ 195(1)(ಬಿ)(i) ನೇ ಪ್ರಕರಣದಡಿ ವಿಚಾರಣೆಗಾಗಿ ಆದೇಶಿಸಬೇಕೆಂದು ಕೋರಿದ್ದಾರೆ.

7. ಮೇಲೆ ಹೇಳಿದ ಕ್ರಿಮಿನಲ್ ಅರ್ಜಿಯಲ್ಲಿ, ಇದರಲ್ಲಿನ ಆರೋಪಿ/ಪ್ರತಿವಾದಿಗಳ ವಿರುದ್ಧ ಆರೋಪ ಪಟ್ಟಿಯನ್ನು ಸಲ್ಲಿಸುವ ಕುರಿತು ಅರ್ಜಿಯನ್ನು ಹಿಂತೆಗೆದುಕೊಳ್ಳಲು ಕೋರಿ, ಅವರುದಿನಾಂಕ: 4.12.2018 ರ ಜ್ಞಾಪನವನ್ನು ಸಲ್ಲಿಸಿದ್ದಾರೆ.ಈ ನ್ಯಾಯಾಲಯವು ಅದನ್ನು ಪರಿಶೀಲಿಸಿದ ತರುವಾಯ, ಆರೋಪ ಪಟ್ಟಿಯನ್ನು ಸಲ್ಲಿಸಿರುವುದರಿಂದ, ಅರ್ಜಿದಾರರು ಪ್ರಥಮ ಮಾಹಿತಿ ವರದಿಯನ್ನು ರದ್ದುಗೊಳಿಸಲು ಕೋರಿರುವುದು

ನ್ಯಾಯದ ಉದ್ದೇಶವನ್ನು ಸಾಧಿಸಿದಂತಾಗುವುದಿಲ್ಲವೆಂದು ಅಭಿಪ್ರಾಯಪಟ್ಟು, ಆರೋಪ ಪಟ್ಟಿಯನ್ನು ಪ್ರಶ್ನಿಸಿ ಆರೋಪಿಗಳು ಸಲ್ಲಿಸಿರುವ ಕ್ರಿಮಿನಲ್ ಅರ್ಜಿಸಂಖ್ಯೆ: 6085/2018 ರಲ್ಲಿನ ಪಕ್ಷಕಾರರೀರ್ವರ ವಾದಗಳನ್ನು ಮಂಡಿಸಲು ಅವರ ಸ್ವಾತಂತ್ರ್ಯವನ್ನು ಕಾಯ್ದಿರಿಸಿ, ದಿನಾಂಕ:09.04.2019 ರ ಆದೇಶದ ಮೂಲಕ ಹಿಂಪಡೆಯಲಾದ ಕ್ರಿಮಿನಲ್ ಅರ್ಜಿಸಂಖ್ಯೆ: 8789/2017 ನ್ನು ವಜಾಗೊಳಿಸಿದೆ.ಸದರಿ ಆದೇಶದಿಂದ ಬಾಧಿತರಾಗಿ, ಅಪೀಲುದಾರರು ಪ್ರಸ್ತುತ ಅಪೀಲನ್ನು ಸಲ್ಲಿಸಿದ್ದಾರೆ.

8. ಕ್ರಿಮಿನಲ್ ಅರ್ಜಿಸಂಖ್ಯೆ: 8789/2017 ರಲ್ಲಿ ಅವರು ಸಲ್ಲಿಸಿದ ಅರ್ಜಿ ಐ.ಎ.ಸಂಖ್ಯೆ: 1/2019 ಈಗಲೂ ಇತ್ಯರ್ಥದಲ್ಲಿದೆ ಮತ್ತು ಆದುದರಿಂದ ಅದನ್ನು ಪರಿಗಣಿಸದೆ ಸದರಿ ಅರ್ಜಿಯನ್ನು ವಿಲೆ ಮಾಡಲಾಗದು ಎಂಬುದು ಅಪೀಲುದಾರರ/ಖುದ್ದು ಪಕ್ಷಕಾರರ ವಾದವಾಗಿದೆ.ದಂಡ ಪ್ರಕ್ರಿಯಾ ಸಂಹಿತೆಯ 340 ನೇ ಪ್ರಕರಣದಡಿಯಲ್ಲಿ ಸಲ್ಲಿಸಿದ ಅರ್ಜಿಯನ್ನು ನಿರ್ಧರಿಸಿರುವುದಿಲ್ಲ ಮತ್ತು ದಂಡ ಪ್ರಕ್ರಿಯಾ ಸಂಹಿತೆಯ 340 ನೇ ಪ್ರಕರಣದಡಿಯಲ್ಲಿ ವಿಚಾರಣೆಯನ್ನು ಪ್ರಾರಂಭಿಸಬೇಕಿತ್ತು; ಆದ್ದರಿಂದ, ಈ ನ್ಯಾಯಾಲಯದ ಮುಂದೆ ಪ್ರಶ್ನಿಸಲಾದ ಆದೇಶವು ದಂಡ ಪ್ರಕ್ರಿಯಾ ಸಂಹಿತೆಯ 341 ನೇ ಪ್ರಕರಣದಡಿಯಲ್ಲಿ ಅಪೀಲು ಯೋಗ್ಯವಾಗಿದೆ ಮತ್ತು ನ್ಯಾಯಾಲಯವು ಅಂಗೀಕರಿಸುವ ಮೂಲಕವಾಗಲಿ ಅಥವಾ ನಿರಾಕರಿಸುವ ಮೂಲಕವಾಗಲಿ, ದಂಡ ಪ್ರಕ್ರಿಯಾ ಸಂಹಿತೆಯ 340 ನೇ ಪ್ರಕರಣದಡಿಯಲ್ಲಿ ಸಲ್ಲಿಸಿದ ಅರ್ಜಿಯನ್ನು ಕುರಿತು ಆದೇಶವನ್ನು ಹೊರಡಿಸಿರುವುದು, ದಂಡ ಪ್ರಕ್ರಿಯಾ ಸಂಹಿತೆಯ 341 ನೇ ಪ್ರಕರಣದಡಿಯಲ್ಲಿನ ಅಪೀಲಿನೊಂದಿಗೆ ವ್ಯವಹರಿಸುವ ನ್ಯಾಯಾಲಯಕ್ಕೆ ಅಧೀನ ನ್ಯಾಯಾಲಯವಾಗಿದೆ ಎಂದು ನಿವೇದಿಸಿಕೊಂಡಿದ್ದಾರೆ.ಆದುದರಿಂದ, ದಂಡ ಪ್ರಕ್ರಿಯಾ ಸಂಹಿತೆಯ 341 ನೇ ಪ್ರಕರಣದಡಿ ಸಲ್ಲಿಸಿದ ಪ್ರಸ್ತುತ ಅಪೀಲು, ಈ ನ್ಯಾಯಾಲಯದ ಏಕ ಪೀಠದ ಮು ಂ ದೆಯಾಗಲಿ ಅಥವಾ ವಿಭಾಗೀಯ ಪೀಠದ ಮು ಂ ದೆಯಾಗಲಿ ಸಮರ್ಥನೀಯವಾದುದಾಗಿದ್ದು, ಅದನ್ನು ಕಾನೂನಿಗನುಗುಣವಾಗಿ ನಿರ್ಧರಿಸ ಬಹುದಾಗಿದೆ ಎಂದು ಸಹ ಅವರು ನಿವೇದಿಸಿಕೊಂಡಿದ್ದಾರೆ.

9. ತಮ್ಮ ವಾದಗಳ ಸಮರ್ಥನೆಗೆ ಅಪೀಲುದಾರರು ಈ ಮುಂದಿನ ತೀರ್ಪುಗಳನ್ನವಲಂಬಿಸಿದ್ದಾರೆ:

( 1) ಎಮ್.ಎಸ್. ಷರೀಫ್ ಮತ್ತು ಇನ್ನೊಬ್ಬರು ವಿರುದ್ಧ-ಮದ್ರಾಸ್ ರಾಜ್ಯ ಮತ್ತು ಇತರರು - ಎಐಆರ್ 1954 ಎಸ್ಸಿ 397;

( 2) ಪ್ರಿತೀಶ್ -ವಿರುದ್ಧ-ಮಹಾರಾಷ್ಟ್ರ ರಾಜ್ಯ ಮತ್ತು ಇತರರು - (2002) 1 ಎಸ್ಸಿಸಿ 253;

( 3) ತಾರುಲತಾ ಮೊಂಡಲ್ ವಿರುದ್ಧ ಪಶ್ಚಿಮ ಬಂಗಾಳ ರಾಜ್ಯ ಮತ್ತು ಇತರರು - 2013 ಸಿಆರ್ಐ.ಎಲ್.ಜೆ.3882 706,.

10. ಇಲ್ಲಿ ಉದ್ಭವಿಸಿದ ಅಂಶವೆಂದರೆ-ದಂಡ ಪ್ರಕ್ರಿಯಾ ಸಂಹಿತೆಯ 341 ನೇ ಪ್ರಕರಣದಡಿಯ ಕ್ರಿಮಿನಲ್ ಅಪೀಲನ್ನು, ದಂಡ ಪ್ರಕ್ರಿಯಾ ಸಂಹಿತೆಯ 482 ನೇ ಪ್ರಕರಣದಡಿ ಸಲ್ಲಿಸಿದ ಅರ್ಜಿಯಲ್ಲಿ, ಈ ನ್ಯಾಯಾಲಯದ ಸಹ-ಪೀಠವು ಹೊರಡಿಸಿದ ಆದೇಶದ ವಿರುದ್ಧ ಅಥವಾ ದಂಡ ಪ್ರಕ್ರಿಯಾ ಸಂಹಿತೆಯ 340 ನೇ ಪ್ರಕರಣದಡಿ ದೂರನ್ನು ಸಲ್ಲಿಸುವುದನ್ನು ನಿರಾಕರಿಸುವುದರ ವಿರುದ್ಧ ಸಲ್ಲಿಸಲಾಗಿದೆಯೇ ಅಥವಾ ಯಾರ ವಿರುದ್ಧ ಅಂಥ ದೂರನ್ನು ಸಲ್ಲಿಸಲಾಗಿದೆಯೋ, ಅದು ಈ ನ್ಯಾಯಾಲಯದ ವಿಭಾಗೀಯ ಪೀಠದ ಮುಂದೆ ಸಮರ್ಥನೀಯವಾದುದಾಗಿದೆಯೇ ಅಥವಾ ಏಕ ಪೀಠ ನ್ಯಾಯಾಧೀಶರ ಮುಂದೆ ಸಮರ್ಥನೀಯವಾದುದಾಗಿದೆಯೇ?

11. ದಂಡ ಪ್ರಕ್ರಿಯಾ ಸಂಹಿತೆಯ 482 ನೇ ಪ್ರಕರಣದಡಿ ಆರೋಪಿತ ವ್ಯಕ್ತಿಗಳು ಸಲ್ಲಿಸಿದ ಕ್ರಿಮಿನಲ್ ಅರ್ಜಿಸಂಖ್ಯೆ: 8789/2017 ರಲ್ಲಿ, ಈ ನ್ಯಾಯಾಲಯದ ಸಹ-ಪೀಠವು ಪ್ರಶ್ನಿತ ಆದೇಶವನ್ನು ಹೊರಡಿಸಿದೆ.ಪ್ರತ್ಯೇಕ ಕ್ರಿಮಿನಲ್ ಅರ್ಜಿಸಂಖ್ಯೆ: 6085/2018 ರಲ್ಲಿ ಆರೋಪಿಗಳ ವಿರುದ್ಧ ದಾಖಲಿಸಿದ ಆರೋಪಪಟ್ಟಿಯನ್ನು ಅವರು ಪ್ರಶ್ನಿಸಿದ್ದನ್ನು ಈ ನ್ಯಾಯಾಲಯವು ಗಮನಿಸಿ, ಕ್ರಿಮಿನಲ್ ಅರ್ಜಿಸಂಖ್ಯೆ: 6085/2018 ರಲ್ಲಿನ ಈರ್ವರೂ ಪಕ್ಷಕಾರರ ವಾದಗಳನ್ನು ಅವರವರಿಗೆ ಮಂಡಿಸುವ ಸ್ವಾತಂತ್ರ್ಯವನ್ನು ಕಾಯ್ದಿರಿಸಿ, ಪ್ರಥಮ ಮಾಹಿತಿ ವರದಿಯನ್ನು ರದ್ದುಪಡಿಸಲು ಕೋರಿ ಸಲ್ಲಿಸಿದ ಕ್ರಿಮಿನಲ್ ಅರ್ಜಿಸಂಖ್ಯೆ: 8789/2017 ನ್ನು ವಜಾಗೊಳಿಸಿದೆ.

12. ಅರ್ಜಿಯನ್ನು ವಜಾಗೊಳಿಸುವಾಗ, ಅಪೀಲುದಾರರು/ಖುದ್ದು ಪಕ್ಷಕಾರರು, ದಂಡ ಪ್ರಕ್ರಿಯಾ ಸಂಹಿತೆಯ 195 ( 1) (ಬಿ) ( i) ನೇ ಪ್ರಕರಣದಡಿ ಪರ್ಯಾಲೋಚಿಸಲಾದಂತೆ ವಿಚಾರಣೆ ನಡೆಸಲು ಕೋರಿ, ದಂಡ ಪ್ರಕ್ರಿಯಾ ಸಂಹಿತೆಯ 340 ನೇ ಪ್ರಕರಣದಡಿ ಸಲ್ಲಿಸಿದ ಐ.ಎ.ಸಂಖ್ಯೆ: 1/2019 ನ್ನು ಪರಿಗಣಿಸಿರುವುದಿಲ್ಲ ಮತ್ತು ಸದರಿ ಅರ್ಜಿಯ ಸಂಬಂಧದಲ್ಲಿ ಯಾವುದೇ ಆದೇಶವನ್ನು ಹೊರಡಿಸಿರುವುದಿಲ್ಲವೆಂಬುದು ಅವರ ಅಹವಾಲಾಗಿದೆ.

13. ಒಪ್ಪಿಕೊಂಡಿರುವಂತೆ, ಈ ನ್ಯಾಯಾಲಯದ ಸಹ-ಪೀಠವು ಪ್ರಶ್ನಿತ ಆದೇಶವನ್ನು ಹೊರಡಿಸಿದೆ.ಅಪೀಲುದಾರರ ಪ್ರಕಾರ, ಸದರಿ ಆದೇಶವು, ಈ ನ್ಯಾಯಾಲಯದ ಮುಂದೆ ದಂಡ ಪ್ರಕ್ರಿಯಾ ಸಂಹಿತೆಯ 341 ನೇ ಪ್ರಕರಣದಡಿ ಅಪೀಲುಯೋಗ್ಯವಾಗಿದೆ ಮತ್ತು ಆದೇಶವನ್ನು ಹೊರಡಿಸಿದ ಪೀಠವು, ದಂಡ ಪ್ರಕ್ರಿಯಾ ಸಂಹಿತೆಯ 341 ನೇ ಪ್ರಕರಣದಡಿ ಅಪೀಲನ್ನು ವ್ಯವಹರಿಸುತ್ತಿರುವ ಪೀಠಕ್ಕೆ ಅಧೀನ ನ್ಯಾಯಾಲಯವಾಗಿದೆ.

14. ದಂಡ ಪ್ರಕ್ರಿಯಾ ಸಂಹಿತೆಯ 341 ನೇ ಪ್ರಕರಣವನ್ನು ಈ ಕೆಳಗಿನಂತೆ ಓದಲಾಗಿದೆ:

" ಉಚ್ಚ ನ್ಯಾಯಾಲಯವಲ್ಲದ ಯಾವುದೇ ನ್ಯಾಯಾಲಯವು, ಚ ಯಾರ ಅರ್ಜಿಯ ಆಧಾರದ ಮೇಲೆ 340 ನೇ ಪ್ರಕರಣದ ( 1) ನೇ ಅಥವಾ ( 2) ನೇ ಉಪ-ಪ್ರಕರಣದ ಮೇರೆಗೆ ಫಿರ್ಯಾದನ್ನು ಮಾಡಲು ತಿರಸ್ಕರಿಸಿದೆಯೋ ಅಥವಾ ಅಂಥ ನ್ಯಾಯಾಲಯವು ಯಾರ ವಿರುದ್ಧ ಅಂತಹ ಫಿರ್ಯಾದನ್ನು ಮಾಡಿದೆಯೋ, ಆ ಯಾರೇ ವ್ಯಕ್ತಿಯು, ಅಂತಹ ಮೊದಲಿನ ನ್ಯಾಯಾಲಯವು 195 ನೇ ಪ್ರಕರಣದ (4) ನೇ ಉಪ-ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಯಾವ ನ್ಯಾಯಾಲಯಕ್ಕೆ ಅಧೀನವಾಗಿದೆಯೋ ಆ ನ್ಯಾಯಾಲಯಕ್ಕೆ ಅಪೀಲು ಮಾಡಬಹುದು ಮತ್ತು ಆ ತರುವಾಯ ವರಿಷ್ಠ ನ್ಯಾಯಾಲಯವು ಸಂಬಂಧಪಟ್ಟ ಪಕ್ಷಕಾರರಿಗೆ ನೋಟೀಸನ್ನು ನೀಡಿದ ನಂತರ, ಫಿರ್ಯಾದನ್ನು ಹಿಂತೆಗೆದುಕೊಳ್ಳಲು ಅಥವಾ ಸಂದರ್ಭಾನುಸಾರ, 340 ನೇ ಪ್ರಕರಣದ ಮೇರೆಗೆ ಅಂಥ ಮೊದಲಿನ ನ್ಯಾಯಾಲಯವು, ಮಾಡಬಹುದಾಗಿದ್ದ ಫಿರ್ಯಾದನ್ನು ಮಾಡಲು ನಿರ್ದೇಶಿಸಬಹುದು ಮತ್ತು ಅದು ಅಂಥ ಫಿರ್ಯಾದನ್ನು ಮಾಡಿದರೆ, ಆ ಪ್ರಕರಣದ ಉಪಬಂಧಗಳು ತದನುಸಾರ ಅನ್ವಯವಾಗತಕ್ಕದ್ದು.

15. ದಂಡ ಪ್ರಕ್ರಿಯಾ ಸಂಹಿತೆಯ 341 ನೇ ಪ್ರಕರಣದ ಸ್ಪಷ್ಟ ಓದುವಿಕೆಯು, ಯಾವ ವ್ಯಕ್ತಿಯ ಅರ್ಜಿಯನ್ನು, ಉಚ್ಚ ನ್ಯಾಯಾಲಯವನ್ನು ಹೊರತುಪಡಿಸಿ ಯಾವುದೇ ಇತರ ನ್ಯಾಯಾಲಯವು, ದಂಡ ಪ್ರಕ್ರಿಯಾ ಸಂಹಿತೆಯ 340 ನೇ ಪ್ರಕರಣದ ( 1) ನೇ ಉಪ-ಪ್ರಕರಣದ ಅಥವಾ ( 2) ನೇ ಉಪ-ಪ್ರಕರಣದ ಅಡಿಯಲ್ಲಿ ದೂರನ್ನು ಸಲ್ಲಿಸಲು ನಿರಾಕರಿಸುತ್ತದೆಯೋ, ಆ ವ್ಯಕ್ತಿಯು, ಅಂಥ ಹಿಂದಿನ ನ್ಯಾಯಾಲಯವು ಯಾವ ನ್ಯಾಯಾಲಯಕ್ಕೆ ಅಧೀನವಾಗಿರುವುದೋ ಆ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಬಹುದು.ಪ್ರಸ್ತುತ ಮೊಕದ್ದಮೆಯಲ್ಲಿ, ಪ್ರಶ್ನೆಯಲ್ಲಿರುವ ಪ್ರಶ್ನಿತ ಆದೇಶವನ್ನು, ಉಚ್ಚ ನ್ಯಾಯಾಲಯವನ್ನು ಹೊರತುಪಡಿಸಿ ಇತರ ನ್ಯಾಯಾಲಯವು ಹೊರಡಿಸಿರಬಾರದು.ಆದ್ದರಿಂದ, ದಂಡ ಪ್ರಕ್ರಿಯಾ ಸಂಹಿತೆಯ 341 ನೇ ಪ್ರಕರಣದಡಿ ಸದರಿ ಆದೇಶವು ಈ ನ್ಯಾಯಾಲಯದ ಮುಂದೆ ಅಪೀಲುಯೋಗ್ಯವಾಗಿದೆ ಎಂಬ ಅಪೀಲುದಾರರ ವಾದವು ಯುಕ್ತವಾದುದಾಗಿರುವುದಿಲ್ಲ.

16. ದಂಡ ಪ್ರಕ್ರಿಯಾ ಸಂಹಿತೆಯ 195 ( 4) ನೇ ಪ್ರಕರಣದ ( ಎ) ಮತ್ತು (ಬಿ) ಕಂಡಿಕೆಯನ್ನು ಈ ಕೆಳಗಿನಂತೆ ಓದಲಾಗಿದೆ:

"( 4) ( 1) ನೇ ಉಪ-ಪ್ರಕರಣದ (ಬಿ) ಖಂಡದ ಉದ್ದೇಶಗಳಿಗಾಗಿ, ಒಂದು ನ್ಯಾಯಾಲಯವು, ಆ ನ್ಯಾಯಾಲಯದ ಅಪೀಲೀಯ ಡಿಗ್ರಿಗಳ ಅಥವಾ ದಂಡಾದೇಶಗಳ ಬಗ್ಗೆ ಸಾಮಾನ್ಯವಾಗಿ ಅಪೀಲುಗಳು ಇರುವ ನ್ಯಾಯಾಲಯಕ್ಕೆ ಅಧೀನವಾಗಿರುವುದೆಂದು ಭಾವಿಸತಕ್ಕದ್ದು ಅಥವಾ ಯಾವ ನ್ಯಾಯಾಲಯದ ಡಿಗ್ರಿಗಳ ಬಗ್ಗೆ ಸಾಮಾನ್ಯವಾಗಿ ಯಾವುದೇ ಅಪೀಲು ಇರುವುದಿಲ್ಲವೋ ಆ ಸಿವಿಲ್ ನ್ಯಾಯಾಲಯದ ಸಂದರ್ಭದಲ್ಲಿ, ಅಂಥ ಸಿವಿಲ್ ನ್ಯಾಯಾಲಯವು ಯಾವ ನ್ಯಾಯಾಲಯದ ಸ್ಥಳೀಯ ಅಧಿಕಾರ ವ್ಯಾಪ್ತಿಯೊಳಗೆ ಇರುವುದೋ ಆ ಸಾಮಾನ್ಯ ಮೂಲ ಸಿವಿಲ್ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಪ್ರಧಾನ ನ್ಯಾಯಾಲಯಕ್ಕೆ ಅಧೀನವಾಗಿರುವುದೆಂದು ಭಾವಿಸತಕ್ಕದ್ದು:

ಪರಂತು"

(ಎ) ಒಂದಕ್ಕಿಂತ ಹೆಚ್ಚು ನ್ಯಾಯಾಲಯಗಳಿಗೆ ಅಪೀಲು ಮಾಡಲು ಅವಕಾಶ ಇರುವಲ್ಲಿ, ಕಡಿಮೆ ಅಧಿಕಾರ ವ್ಯಾಪ್ತಿಯುಳ್ಳ ಅಪೀಲು ನ್ಯಾಯಾಲಯಕ್ಕೆ ಅಂಥ ನ್ಯಾಯಾಲಯವು ಅಧೀನವಾಗಿರುವುದೆಂದು ಭಾವಿಸತಕ್ಕದ್ದು:

(ಬಿ) ಸಿವಿಲ್ ಮತ್ತು ರೆವಿನ್ಯೂ ನ್ಯಾಯಾಲಯಕ್ಕೂ ಅಪೀಲು ಮಾಡಿಕೊಳ್ಳುವ ಅವಕಾಶ ಇರುವಲ್ಲಿ, ಯಾವುದರ ಸಂದರ್ಭದಲ್ಲಿ ಅಪರಾಧವನ್ನು ಮಾಡಲಾಗಿದೆಯೆಂದು ಆರೋಪಿತವಾಗಿದೆಯೋ ಆ ಮೊಕದ್ದಮೆಯ ಅಥವಾ ವ್ಯವಹರಣೆಯ ಸ್ವರೂಪಕ್ಕೆ ಅನುಸಾರವಾಗಿ ಅಂಥ ನ್ಯಾಯಾಲಯವು ಸಿವಿಲ್ ಅಥವಾ ರೆವಿನ್ಯೂ ನ್ಯಾಯಾಲಯಕ್ಕೆ ಅಧೀನವಾಗಿರುವುದೆಂದು ಭಾವಿಸತಕ್ಕದ್ದು."

17. ಈ ನ್ಯಾಯಾಲಯದ ಏಕಪೀಠವು ಅಥವಾ ವಿಭಾಗೀಯ ಪೀಠವು, ದಂಡ ಪ್ರಕ್ರಿಯಾ ಸಂಹಿತೆಯ 340 ನೇ ಪ್ರಕರಣದ ಅಡಿಯಲ್ಲಿ ಮಾನ್ಯ ಏಕಪೀಠ ನ್ಯಾಯಾಧೀಶರು ಹೊರಡಿಸಿದ ಆಜ್ಞೆಯ ವಿರುದ್ಧ ದಂಡ ಪ್ರಕ್ರಿಯಾ ಸಂಹಿತೆಯ 341 ನೇ ಪ್ರಕರಣದ ಅಡಿಯಲ್ಲಿ ಸಲ್ಲಿಸಿದ ಅಪೀಲಿಗೆ ಅವಕಾಶ ನೀಡಬಹುದು ಎಂಬ ಯಾವುದೇ ಸೂಚನೆಯನ್ನು ಮೇಲಿನ ಉಪಬಂಧವು ನೀಡುವುದಿಲ್ಲ.ದಂಡ ಪ್ರಕ್ರಿಯಾ ಸಂಹಿತೆಯ 482 ನೇ ಪ್ರಕರಣದ ಅಡಿಯಲ್ಲಿನ ಕ್ರಿಮಿನಲ್ ಅರ್ಜಿಯಲ್ಲಿ ಮಾನ್ಯ ಏಕಪೀಠ ನ್ಯಾಯಾಧೀಶರು ಹೊರಡಿಸಿದ ಆಜ್ಞೆಯು, ವಿಭಾಗೀಯ ಪೀಠಕ್ಕೆ ಅಧೀನವಾಗಿರುವ ನ್ಯಾಯಾಲಯಕ್ಕೆ ಅಲ್ಲ. ಕರ್ನಾಟಕ ಉಚ್ಚ ನ್ಯಾಯಾಲಯ ಚ ಅಧಿನಿಯಮ, 1961 ರ ಅಡಿಯಲ್ಲಿ, ವಿಭಾಗೀಯ ಪೀಠಕ್ಕೆ ದಂಡ ಪ್ರಕ್ರಿಯಾ ಸಂಹಿತೆಯ 482 ನೇ ಪ್ರಕರಣದ ಅಡಿಯಲ್ಲಿ ಸಲ್ಲಿಸಿದ ಕ್ರಿಮಿನಲ್ ಅರ್ಜಿಯಲ್ಲಿ ಮಾನ್ಯ ಏಕಪೀಠ ನ್ಯಾಯಾಧೀಶರು ಹೊರಡಿಸಿದ ಆಜ್ಞೆಯಿಂದ ಉದ್ಭವಿಸುವ ಅಪೀಲಿಗೆ ಆಸ್ಪದವಿಲ್ಲ.

18. ಕರ್ನಾಟಕ ಉಚ್ಚ ನ್ಯಾಯಾಲಯ ಅಧಿನಿಯಮ, 1961 ರ 5(ii) ನೇ ಪ್ರಕರಣವನ್ನು ಈ ಕೆಳಗಿನಂತೆ ಓದಲಾಗಿದೆ:

(1) ಮರಣ ದಂಡನೆಯನ್ನು ಅಥವಾ ಜೀವಾವಧಿ ಶಿಕ್ಷೆಯನ್ನು ವಿಧಿಸಲಾಗಿರುವ ತೀರ್ಪುಗಳ ವಿರುದ್ಧದ ಹಾಗೂ ಮರಣದಂಡನೆ ಅಥವಾ ಜೀವಾವಧಿ ಶಿಕ್ಷೆಯಲ್ಲಿ ಖುಲಾಸೆಗೊಳಿಸಿರುವ ತೀರ್ಪುಗಳ ವಿರುದ್ಧದ ಎಲ್ಲಾ ಕ್ರಿಮಿನಲ್ ಅಪೀಲುಗಳನ್ನು, ಉಚ್ಚ ನ್ಯಾಯಾಲಯದ ಇಬ್ಬರಿಗಿಂತ ಕಡಿಮೆ ಇರದ ನ್ಯಾಯಾಧೀಶರನ್ನು ಒಳಗೊಂಡಿರುವ ಪೀಠವು ಆಲಿಸತಕ್ಕದ್ದು ಮತ್ತು ಇತರ ಕ್ರಿಮಿನಲ್ ಅಪೀಲುಗಳನ್ನು ಉಚ್ಚ ನ್ಯಾಯಾಲಯದ ಏಕಪೀಠ ನ್ಯಾಯಾಧೀಶರು ಚ ಆಲಿಸತಕ್ಕದ್ದು."

19. ಆದುದರಿಂದ, ಮರಣ ದಂಡನೆ ಅಥವಾ ಜೀವಾವಧಿ ಶಿಕ್ಷೆಯನ್ನು ವಿಧಿಸಿರುವ ತೀರ್ಪುಗಳ ವಿರುದ್ಧದ ಕ್ರಿಮಿನಲ್ ಅಪೀಲುಗಳ ಹಾಗೂ ಮರಣ ದಂಡನೆ ಅಥವಾ ಜೀವಾವಧಿ ಶಿಕ್ಷೆಯಿಂದ ದಂಡನೀಯವಾಗಿರುವ ಅಪರಾಧಗಳಿರುವ ಮೊಕದ್ದಮೆಗಳಲ್ಲಿ ಖುಲಾಸೆಗೊಳಿಸುವ ತೀರ್ಪುಗಳ ವಿರುದ್ಧದ ಕ್ರಿಮಿನಲ್ ಅಪೀಲುಗಳನ್ನು ಉಚ್ಚ ನ್ಯಾಯಾಲಯದ ಇಬ್ಬರಿಗಿಂತ ಕಡಿಮೆ ಇರದ ನ್ಯಾಯಾಧೀಶರನ್ನು ಒಳಗೊಂಡ ಪೀಠವು ಆಲಿಸತಕ್ಕದ್ದು ಮತ್ತು ಇತರ ಕ್ರಿಮಿನಲ್ ಅಪೀಲುಗಳನ್ನು ಏಕಪೀಠ ನ್ಯಾಯಾಧೀಶರು ಆಲಿಸತಕ್ಕದ್ದು ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.ಆ ಕ್ರಿಮಿನಲ್ ಅಪೀಲುಗಳು, ಉಚ್ಚ ನ್ಯಾಯಾಲಯಕ್ಕೆ ಅಧೀನವಾಗಿರುವ ನ್ಯಾಯಾಲಯವು ನೀಡಿದ ತೀರ್ಪು ಮತ್ತು ಆಜ್ಞೆಯಿಂದ ಉದ್ಭವಿಸುತ್ತವೆ.ಆದ್ದರಿಂದ, ಉಚ್ಚ ನ್ಯಾಯಾಲಯಕ್ಕೆ ಅಧೀನ ನ್ಯಾಯಾಲಯವು ಚ ನೀಡಿದ ಆಜ್ಞೆಯ ವಿರುದ್ಧ, ದಂಡ ಪ್ರಕ್ರಿಯಾ ಸಂಹಿತೆಯ 341 ನೇ ಪ್ರಕರಣದ ಮೇರೆಗೆ ಅಪೀಲಾಗಿದ್ದರೂ ಸಹ, ಅದನ್ನು ಉಚ್ಚ ನ್ಯಾಯಾಲಯದ ಮಾನ್ಯ ಚ ಏಕಪೀಠ ನ್ಯಾಯಾಧೀಶರ ಮುಂದೆ ಸಲ್ಲಿಸಬೇಕಾಗುತ್ತದೆ.ದಂಡ ಪ್ರಕ್ರಿಯಾ ಸಂಹಿತೆಯ 341 ನೇ ಪ್ರಕರಣದ ಮೇರೆಗಿನ ಅಪೀಲು, ಕರ್ನಾಟಕ ಉಚ್ಚ ನ್ಯಾಯಾಲಯ ಅಧಿನಿಯಮದ 5 ನೇ ಪ್ರಕರಣದ ಅಡಿಯಲ್ಲಿ ಉಪಬಂಧಿಸಿದಂತೆ, ' ಇತರ ಕ್ರಿಮಿನಲ್ ಅಪೀಲುಗಳ ' ಪರಿಭಾಷೆ ಅಡಿಯಲ್ಲಿ ಬರುತ್ತದೆ.

20. ಮೇಲೆ ಹೇಳಿದ ಮೊಕದ್ದಮೆಗಳಲ್ಲಿ ಅಪೀಲುದಾರನು ಅವಲಂಬಿಸಿದ ತೀರ್ಪುಗಳು, ಪ್ರಸ್ತುತ ಮೊಕದ್ದಮೆಗೆ ಅನ್ವಯವಾಗುವುದಿಲ್ಲ.

21. ಅಪೀಲುದಾರರು ಅವಲಂಬಿಸಿದ ಪ್ರಿತೀಶ್ -ವಿರುದ್ಧ-ಮಹಾರಾಷ್ಟ್ರ ರಾಜ್ಯ (ಮೇಲೆ ಹೇಳದ) ಮೊಕದ್ದಮೆಯಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು ಈ ಕೆಳಗಿನಂತೆ ಕಂಡಿಕೆ 14 ರಲ್ಲಿ ತೀರ್ಪು ನೀಡಿದೆ:

"14.ಸಂಹಿತೆಯ 341 ನೇ ಪ್ರಕರಣವು, ಯಾರ ಅರ್ಜಿಯ ಆಧಾರದ ಮೇಲೆ ನ್ಯಾಯಾಲಯವು ದೂರನ್ನು ಸಲ್ಲಿಸಲು ನಿರ್ಧರಿಸಿದೆಯೋ ಅಥವಾ ನಿರ್ಧರಿಸಿಲ್ಲವೋ, ಆ ಪಕ್ಷಕಾರನ ಮೇಲೆ, ಅಷ್ಟೇ ಅಲ್ಲದೆ ಅಂಥ ದೂರನ್ನು ಸಲ್ಲಿಸಲು ಯಾರ ವಿರುದ್ಧ ನಿರ್ಧರಿಸಲಾಗಿದೆಯೋ ಆ ಪಕ್ಷಕಾರನ ಮೇಲೆ, ಹಿಂದಿನ ನ್ಯಾಯಾಲಯವು ಅಧೀನವಾಗಿರುವ ನ್ಯಾಯಾಲಯಕ್ಕೆ ಅಪೀಲನ್ನು ಸಲ್ಲಿಸುವ ಅಧಿಕಾರವನ್ನು ಪ್ರದತ್ತಗೊಳಿಸುತ್ತದೆ.ಆದರೆ, ಅಂಥ ಒಂದು ಅಪೀಲನ್ನು ಉಪಬಂಧಿಸಲಾಗಿದೆ ಎಂಬ ಸಂಗತಿ ಮಾತ್ರದಿಂದ, ದೂರನ್ನು ಸಲ್ಲಿಸುವ ಮೊದಲು ಅಹವಾಲನ್ನು ಆಲಿಸುವ ಅವಕಾಶವನ್ನು (ಯಾರ ವಿರುದ್ಧ ದೂರನ್ನು ಸಲ್ಲಿಸಬೇಕಾಗಿದೆಯೋ ಆ ವ್ಯಕ್ತಿಗಳಿಗೆ) ನೀಡುವ ಕಾನೂನು ಬಾಧ್ಯತೆಯನ್ನು ನ್ಯಾಯಾಲಯವು ಹೊಂದಿದೆ ಎಂಬ ನಿರ್ಣಯಕ್ಕೆ ಇದು ಪೂರ್ವೋಕ್ತವಾಗುವುದಿಲ್ಲ.ಒಬ್ಬ ಬ ವ್ಯಕ್ತಿಯನ್ನು ಕ್ರಿಮಿನಲ್ ವ್ಯವಹರಣೆಗಳಲ್ಲಿ ಆರೋಪಿ ಎಂದು ಪಟ್ಟಿ ಮಾಡಬೇಕೇ ಅಥವಾ ಬೇಡವೇ ಎಂಬ ನಿರ್ಣಯಕ್ಕೆ ಬರಲು ಸಂಹಿತೆಯಲ್ಲಿ ಇತರ ಉಪಬಂಧಗಳಿವೆಯಾದರೂ, ಅವುಗಳಲ್ಲಿ ಅ ಬಹಳಷ್ಟು ವ್ಯವಹರಣೆಗಳಲ್ಲಿ, ನ್ಯಾಯಾಲಯದ ಅಥವಾ ಸಂಬಂಧಪಟ್ಟ ಪ್ರಾಧಿಕಾರಿಗಳ ಮೇಲೆ, ಭಾವಿ ಆರೋಪಿಗೆ ಅಹವಾಲನ್ನು ಹೇಳಿಕೊಳ್ಳುವ ಅವಕಾಶವನ್ನು ನೀಡಲು ಯಾವುದೇ ಕಾನೂನು ಬಾಧ್ಯತೆಯನ್ನು ಹೊರಿಸುವುದಿಲ್ಲ.ಯಾವುದೇ ಸಂದರ್ಭದಲ್ಲಿ, ಈ ಹಿಂದೆ ಹೇಳಿದಂತೆ ಉಚ್ಚ ನ್ಯಾಯಾಲಯದ ಮುಂದೆ ಅಪೀಲನ್ನು ಸಲ್ಲಿಸುವ ಮೂಲಕ ಸಂಹಿತೆಯ 341 ನೇ ಪ್ರಕರಣದ ಉಪಬಂಧಗಳ ಅವಕಾಶವನ್ನು ಅಪೀಲುದಾರನು ಈಗಾಗಲೇ ಪಡೆದುಕೊಂಡಿದ್ದಾನೆ."

22. ಪ್ರಿತೀಶ್ -ವಿರುದ್ಧ-ಮಹಾರಾಷ್ಟ್ರ ರಾಜ್ಯ (ಮೇಲೆ ಹೇಳದ) ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಮಾನ್ಯ ಏಕಪೀಠ ನ್ಯಾಯಾಧೀಶರು, ದಂಡ ಪ್ರಕ್ರಿಯಾ ಸಂಹಿತೆಯ 340 ನೇ ಪ್ರಕರಣದ ಅಡಿಯಲ್ಲಿ ಅರ್ಜಿಯನ್ನು ಪುರಸ್ಕರಿಸಲು ನಿರಾಕರಿಸಿ ನೀಡಿದ ಆಜ್ಞೆಯು, ಅದೇ ನ್ಯಾಯಾಲಯದ ವಿಭಾಗೀಯ ಪೀಠಕ್ಕೆ ಅಪೀಲು ಸಲ್ಲಿಸಬಹುದಾಗಿದೆ ಎಂದು ಅಥವಾ ದಂಡ ಪ್ರಕ್ರಿಯಾ ಸಂಹಿತೆಯ 482 ನೇ ಪ್ರಕರಣದ ಅಡಿಯಲ್ಲಿ ಅಧಿಕಾರವನ್ನು ಚಲಾಯಿಸುವ ಮಾನ್ಯ ಏಕಪೀಠ ನ್ಯಾಯಾಧೀಶರು, ಅದೇ ನ್ಯಾಯಾಲಯದ ವಿಭಾಗೀಯ ಪೀಠಕ್ಕೆ ಅಧೀನ ನ್ಯಾಯಾಲಯವಾಗುವರು ಎಂದು ನಿರ್ಣಯಿಸಿರುವುದಿಲ್ಲ.

23. ಮೇಲೆ ಉಲ್ಲೇಖಿಸಿದ ಎಮ್.ಎಸ್. ಷರೀಫ್ ಮೊಕದ್ದಮೆಯಲ್ಲಿನ 9 ನೇ ಕಂಡಿಕೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು, ' ಅಪೀಲುಯೋಗ್ಯ ' ಡಿಗ್ರಿಗಳಿಂದ ಮತ್ತು ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠದ ಶಿಕ್ಷೆಗಳಿಂದ ' ಸಾಮಾನ್ಯವಾಗಿ ಚ 9 ಅಪೀಲಿಗೆ ಆಸ್ಪದವಿರುವ ಏಕಮಾತ್ರ ನ್ಯಾಯಾಲಯ ಎಂದರೆ ಅದು ಸದರಿ ನ್ಯಾಯಾಲಯ, ಅಂದರೆ ಸರ್ವೋಚ್ಚ ನ್ಯಾಯಾಲಯ.ಆದುದರಿಂದ, ದಂಡ ಪ್ರಕ್ರಿಯಾ ಜ ಸಂಹಿತೆಯ 195 ( 3) ನೇ ಪ್ರಕರಣದ ಅರ್ಥವ್ಯಾಪ್ತಿಯಲ್ಲಿ, ಉಚ್ಚ ನ್ಯಾಯಾಲಯದ ಚ ವಿಭಾಗೀಯ ಪೀಠವು ಸರ್ವೋಚ್ಚ ನ್ಯಾಯಾಲಯಕ್ಕೆ 66 ಅಧೀನ ' ನ್ಯಾಯಾಲಯವಾಗುತ್ತದೆ.ದಂಡ ಪ್ರಕ್ರಿಯಾ ಸಂಹಿತೆಯ (ಹಳೆಯ ಸಂಹಿತೆಯ) 476 ನೇ ಪ್ರಕರಣದ ಅಡಿಯಲ್ಲಿ ಹೊರಡಿಸಿದ ಉಚ್ಚ ನ್ಯಾಯಾಲಯದ ವಿಭಾಗೀಯ ಚ ಪೀಠದ ಆದೇಶದಿಂದ ಮಾನ್ಯ ಸರ್ವೋಚ್ಚ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಲು ಆಸ್ಪದವಿದೆ ಎಂದು ನಿರ್ಣಯಿಸಲಾಗಿದೆ.

24. ಮೇಲೆ ಉಲ್ಲೇಖಿಸಿದ ತಾರುಲತಾ ಮೊಂಡಲ್ ಮೊಕದ್ದಮೆಯಲ್ಲಿ, ಯಾರ ಅರ್ಜಿಯ ಆಧಾರದ ಮೇಲೆ ದೂರನ್ನು ಸಲ್ಲಿಸಲು ನ್ಯಾಯಾಲಯವು ನಿರ್ಧರಿಸುವುದೋ ಅಥವಾ ನಿರ್ಧರಿಸುವುದಿಲ್ಲವೋ ಆ ಪಕ್ಷಕಾರರಿಗೆ, ಅಷ್ಟೇ ಅಲ್ಲದೆ ಯಾರ ವಿರುದ್ಧ ಅದು ಅಂಥ ದೂರನ್ನು ಸಲ್ಲಿಸಲು ನಿರ್ಧರಿಸುವುದೋ ಆ ಪಕ್ಷಕಾರರಿಗೆ, ಹಿಂದಿನ ನ್ಯಾಯಾಲಯವು ಅಧೀನವಾಗಿದ್ದ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಲು, ದಂಡ ಪ್ರಕ್ರಿಯಾ ಸಂಹಿತೆಯ 341 ನೇ ಪ್ರಕರಣವು ಅಧಿಕಾರವನ್ನು ಪ್ರದತ್ತಗೊಳಿಸುತ್ತದೆ.

25. ಈಗಾಗಲೇ ನಿರ್ಣಯಿಸಿರುವಂತೆ, ದಂಡ ಪ್ರಕ್ರಿಯಾ ಸಂಹಿತೆಯ 482 ನೇ ಪ್ರಕರಣದ ಅಡಿಯಲ್ಲಿನ ಅಧಿಕಾರವನ್ನು ಚಲಾಯಿಸಿ, ಈ ನ್ಯಾಯಾಲಯವು, ದಂಡ ಪ್ರಕ್ರಿಯಾ ಸಂಹಿತೆಯ 340 ನೇ ಪ್ರಕರಣದ ಅಡಿಯಲ್ಲಿ ದೂರನ್ನು ಸಲ್ಲಿಸಲು ನಿರ್ಧರಿಸುವುದು ಅಥವಾ ನಿರ್ಧರಿಸದಿರುವುದು, ಈ ನ್ಯಾಯಾಲಯದ ಏಕಪೀಠ ಅಥವಾ ವಿಭಾಗೀಯ ಪೀಠಕ್ಕೆ ಅಧೀನವಾಗಿರುವ ನ್ಯಾಯಾಲಯವಲ್ಲ ಮತ್ತು ಹಾಗಾಗಿ, ದಂಡ ಪ್ರಕ್ರಿಯಾ ಸಂಹಿತೆಯ 341 ನೇ ಪ್ರಕರಣದ ಅಡಿಯಲ್ಲಿ ಸಲ್ಲಿಸಿದ ಪ್ರಸ್ತುತ ಅಪೀಲು ಸಮರ್ಥನೀಯವಾದುದಲ್ಲ.

27. ಆದುದರಿಂದ, ಈ ನ್ಯಾಯಾಲಯದ ಮಾನ್ಯ ಏಕಪೀಠ ನ್ಯಾಯಾಧೀಶರ ಮುಂದೆ ಅಥವಾ ಈ ನ್ಯಾಯಾಲಯದ ವಿಭಾಗೀಯ ಪೀಠದ ಮುಂದೆ, ಈ ನ್ಯಾಯಾಲಯದ ಮಾನ್ಯ ಏಕಪೀಠ ನ್ಯಾಯಾಧೀಶರು, ದಂಡ ಪ್ರಕ್ರಿಯಾ ಸಂಹಿತೆಯ 340 ನೇ ಪ್ರಕರಣದ ಅಡಿಯಲ್ಲಿ ಸಲ್ಲಿಸಿದ ಅರ್ಜಿಯನ್ನು ಅನುಮತಿಸಿ ಅಥವಾ

ತಿರಸ್ಕರಿಸಿ ನೀಡಿದ ಆದೇಶದ ವಿರುದ್ಧ ದಂಡ ಪ್ರಕ್ರಿಯಾ ಸಂಹಿತೆಯ 341 ನೇ ಪ್ರಕರಣದ ಅಡಿಯಲ್ಲಿನ ಈ ಅಪೀಲಿಗೆ ಆಸ್ಪದವಿರುವುದಿಲ್ಲ.

ಪ್ರಸ್ತುತ ಅಪೀಲು ಸಮರ್ಥನೀಯವಾದುದಲ್ಲ.

ತದನುಸಾರವಾಗಿ, ಅಪೀಲನ್ನು ವಜಾಗೊಳಿಸಲಾಗಿದೆ.